ಓ.ಎಸ್. ನಂಬರ:-53 /2022

ಡಿ.ಢಬ್ಲೂ -:-1 : ಮಲ್ಲಿಕಾರ್ಜುನ ತಂದೆ ಗುರುಲಿಂಗಪ್ಪ ಗೋಳಸಾರ

ದಿನಾಂಕ:- 02-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

*ಮುಂದುವರೆದ ಪಾಟೀ ಸವಾಲು : ಶ್ರೀ. ಎ ಎಸ್ ಕೆ ವಕೀಲರಿಂದ :-*

ಸರ್ವೆ ನಂಬರ ೧೩೬ ರಲ್ಲಿ ೨೦ ಎಕರೆ ೩೧ ಗುಂಟೆ ಜಮೀನು ಇರುತ್ತದೆ. ಅದರಲ್ಲಿ ೧೦ ಎಕರೆ ೧೫ ಗುಂಟೆ ಬಿಂದು ಗುರುಲಿಂಗಪ್ಪ ಗೋಳಸಾರರವರಿಗೆ ಇರುತ್ತದೆ ಮತ್ತು ವಿಶ್ವನಾಥ ಗುರುಲಿಂಗಪ್ಪ ಗೋಳಸಾರರವರಿಗೆ ೧೦ ಎಕರೆ ೧೬ ಗುಂಟೆ ಜಮೀನು ಇರುತ್ತದೆ. ನಮ್ಮ ತಂದೆ ಊರ ಹಿರಿಯರ ಸಮಕ್ಷಮ ಸ್ಟ್ಯಾಂಪ್ ಪೇಪರ ಮೇಲೆ ಜಮೀನನ್ನು ಬಿಂದು ಮತ್ತು ವಿಶ್ವನಾಥರವರಿಗೆ ನೀಡಿರುತ್ತಾರೆ. ಈಗ ಸದರಿ ಜಮೀನು ಅದೇತರನಾಗಿ ಇರುತ್ತದೆ. ಈಗ ಪಹಣಿಯಲ್ಲಿ ೨ನೇ ಪ್ರತಿವಾದಿ ಬಿಂದುರವರಿಗೆ ೪ ಎಕರೆ ಜಮೀನು ಮತ್ತು ೩ನೇ ವಾದಿ ಗಂಗಾಬಾಯಿರವರ ಹೆಸರಿನಲ್ಲಿ ೪ ಎಕರೆ ಜಮೀನು ಇರುತ್ತದೆ ಎಂದರೆ ಸರಿ. ೩ನೇ ಪ್ರತಿವಾದಿ ವಿಶ್ವನಾಥರವರ ಹೆಸರಿನಲ್ಲಿ ಈಗ ೨ ಎಕರೆ ಇದೆ ಎಂದರೆ ಸರಿ. ಈಗ ನನ್ನ ಹೆಸರಿನಲ್ಲಿ ೪ ಎಕರೆ ಜಮೀನು ಇದೆ ಎಂದರೆ ಸರಿ. ಸಾಕ್ಷಿಯು ಅದು ಬಿಂದುರವರಿಗೆ ಸೇರಿದ್ದು ಇರುತ್ತದೆ ಎನ್ನುತ್ತಾರೆ. ೧ನೇ ಪ್ರತಿವಾದಿ ರತ್ನಾಬಾಯಿರವರ ಹೆಸರಿನಲ್ಲಿ ೪ ಎಕರೆ ೩೦ ಗುಂಟೆ ಜಮೀನು ಇರುತ್ತದೆ. ಪಹಣಿಯಲ್ಲಿ ನಮೂದಿಸಿದಂತೆ ನಾವೆಲ್ಲರೂ ಜಮೀನಿನ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ.

ಆ ರೀತಿ ಸ್ವಾಧೀನದಲ್ಲಿ ಪಹಣಿಯಂತೆ ಇದ್ದರೂ ಕೂಡ ನಾನು ಈಗ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ೩ನೇ ವಾದಿ ಗಂಗಾಬಾಯಿ ಸರ್ವೆ ನಂಬರ ೧೩೬ ರ ಜಮೀನಿನ ೪ ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಗಂಗಾಬಾಯಿರವರು ಸದರಿ ಜಮೀನಿನಲ್ಲಿ ಕಬ್ಬು ಬೆಳೆದು, ಕಾರ್ಖಾನೆಗೆ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಬಿಂದುರವರು ಕಳುಹಿಸಿರುತ್ತಾರೆ ಎನ್ನುತ್ತಾರೆ.

೨. ನಿಡಿ-೭೭ ರ ಪರಸ್ಪರ ವರ್ಗಾವಣೆ ವಿಭಾಗ ಪತ್ರದಲ್ಲಿ ಗಂಗಾಬಾಯಿರವರಿಗೆ ೪ ಎಕರೆ ಜಮೀನು ಇದೆ ಎಂದು ತೋರಿಸಲಾಗಿದೆ ಎಂದರೆ ಸರಿ. ಸಾಕ್ಷಿಯು ಗಂಗಾಬಾಯಿ ಅದೆ ಸಮಯದಲ್ಲಿ ಸದರಿ ಜಮೀನನ್ನು ಪವನ್ ತಂದೆ ಬಿಂದು ಗೋಳಸಾರರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎನ್ನುತ್ತಾರೆ. ನಿಡಿ-೭೬ ರ ದಿನಾಂಕ 25-09-1996 ರ ವಿಭಾಗ ಪತ್ರವನ್ನು ನಾವೆ ಸೃಷ್ಠಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ೩ನೇ ವಾದಿಯ ಗಂಡನಾದ ಅಶೋಕರವರ ಸಹಿ ಇರುವುದಿಲ್ಲ, ನಾವೆ ಅದನ್ನು ಸೃಷ್ಠಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-೭೬ ರಂತೆ ಯಾವುದೆ ವಿಭಾಗ ಪತ್ರ ನಮ್ಮ ತಂದೆ ಮಾಡಿಕೊಡದೆ ಇದ್ದರು ನಾವೆ ಅದನ್ನು ಸೃಷ್ಠಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ೧೯೯೬ ರಲ್ಲಿ ಅಶೋಕರವರು ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಓ ಎಸ್ ನಂಬರ ೩೮/೨೦೧೬ ಎಂಬ ದಾವೆಯನ್ನು ಅಶೋಕರವರು ಪಾಲು ಕೇಳಿ ದಾಖಲು ಮಾಡಿದ್ದರು ಎಂದರೆ ಸರಿ. ಸಾಕ್ಷಿಯು ಅದು ವಜಾ

ಆಗಿರುತ್ತದೆ ಎನ್ನುತ್ತಾರೆ. ೨೦೦೦ನೇ ಇಸವಿಯಲ್ಲಿ ನನ್ನ ಅಣ್ಣ ಅಶೋಕರವರಿಗೆ ಆರೋಗ್ಯ ಕೆಟ್ಟಿತ್ತು ಎಂದರೆ ನನಗೆ ಗೊತ್ತಿಲ್ಲ.

೩. ನನ್ನ ಅಣ್ಣ ಅಶೋಕ ತನ್ನ ಆರೋಗ್ಯ ಸರಿಯಿಲ್ಲದ ಕಾರಣ ನ್ಯಾಯಾಲಯಕ್ಕೆ ಹಾಜರಾಗದ ಕಾರಣ ದಾವೆ ವಜಾಗೊಂಡಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಊರಿನ ಹಿರಿಯರು ಹೇಳಿದ ನಂತರ ನನ್ನ ಅಣ್ಣ ಆಸ್ತಿ ಬಿಟ್ಟುಕೊಟ್ಟಿರುತ್ತಾನೆ ಎನ್ನುತ್ತಾರೆ. ಸರ್ವೆ ನಂಬರ ೩೭೭ ರಲ್ಲಿ ಕೆನಾಲ್ ಹೋಗಿದೆ ಎಂದರೆ ಸರಿ. ಸದರಿ ಕೆನಾಲಗೆ ೧ ಎಕರೆ ೩೨ ಗುಂಟೆ ಜಮೀನು ಹೋಗಿರುತ್ತದೆ. ಸರ್ವೆ ನಂಬರ ೧೩೬ ರಲ್ಲಿ ಕೆನಾಲಗೆ ೨ ಎಕರೆ ಜಮೀನು ಹೋಗಿರುತ್ತದೆ. ಸಾಕ್ಷಿಯು ವಿಶ್ವನಾಥರವರ ಪಾಲಿನ ಜಮೀನಿನಲ್ಲಿ ಅದು ಹೋಗಿದೆ ಎನ್ನುತ್ತಾರೆ. ನಾನು ೧ ಲಕ್ಷ ಮೇಲೆ ಪರಿಹಾರದ ಹಣವನ್ನು ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಶೋಕರವರ ಮತ್ತು ಅವರ ಹೆಂಡತಿ-ಮಕ್ಕಳ ಸಹಿ ಪಡೆಯದೆ ಸರ್ವೆ ನಂಬರ ೧೩೬ ಮತ್ತು ಸರ್ವೆ ನಂಬರ ೩೭೭ ರ ಜಮೀನಿಗೆ ಬಂದ ಪರಿಹಾರದ ಹಣವನ್ನು ನಾನೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

೪. ಸರ್ವೆ ನಂಬರ ೩೬೬ ರ ಜಮೀನು ಮಾರಾಟ ಮಾಡಿ, ಸದರಿ ಹಣವನ್ನು ನಾನೆ ಪಡೆದಿರುತ್ತೇನೆ ಎಂದರೆ ಸಾಕ್ಷಿಯು ಸದರಿ ಜಮೀನು ನಮ್ಮ ತಂದೆ ಇದ್ದಾಗಲೆ ಮಾರಾಟ ಮಾಡಲಾಗಿದೆ ಅದು ನನ್ನ ಪಾಲಿಗೆ ಬಂದಿತ್ತು ನಮ್ಮ ತಂದೆಯ ಆರೋಗ್ಯ ಸರಿಯಿಲ್ಲದ ಕಾರಣ ಮಾರಾಟ ಮಾಡಿರುತ್ತೇನೆ

ಎನ್ನುತ್ತಾರೆ. ಸರ್ವೆ ನಂಬರ ೩೬೫ ರಲ್ಲಿ ನನ್ನ ಪಾಲಿಗೆ ೪ ಎಕರೆ ೧೦ ಗುಂಟೆ ಮತ್ತು ೧ ಎಕರೆ ೧೦ ಗುಂಟೆ ಜಮೀನುಗಳು ಬಂದಿದ್ದವು. ಸರ್ವೆ ನಂಬರ ೩೬೬ ರಲ್ಲಿ ಎಷ್ಟು ಜಮೀನು ನಿಮ್ಮ ಪಾಲಿಗೆ ಬಂದಿತ್ತು ಎಂದರೆ ಸಾಕ್ಷಿಯು ಸರ್ವೆ ನಂಬರ ೩೬೫ ಮತ್ತು ೩೬೬ ಎರಡು ಜಮೀನು ಸೇರಿಸಿ ನನಗೆ ೪ ಎಕರೆ ೧೦ ಗುಂಟೆ ಮತ್ತು ೧ ಎಕರೆ ೧೦ ಗುಂಟೆ ಜಮೀನು ಪಾಲಿಗೆ ಬಂದಿದ್ದವು ಎನ್ನುತ್ತಾರೆ. ಸರ್ವೆ ನಂಬರ ೩೬೬ ರಲ್ಲಿ ಉಳಿದ ಜಮೀನು ಯಾರಿಗೆ ಹೋಗಿತ್ತು ಎಂದು ನನಗೆ ಗೊತ್ತಿಲ್ಲ.

೫. ಸರ್ವೆ ನಂಬರ ೩೬೬ ರಲ್ಲಿ ೬ ಎಕರೆ ಜಮೀನು ಇತ್ತು ಎಂದರೆ ಸರಿಯಲ್ಲ. ಸರ್ವೆ ನಂಬರ ೩೭೭ ರಲ್ಲಿ ನನ್ನ ಪಾಲಿಗೆ ೧ ಎಕರೆ ೨ ಗುಂಟೆ ಜಮೀನು ಬಂದಿರುತ್ತದೆ. ಸರ್ವೆ ನಂಬರ ೧೩೬ ರಲ್ಲಿ ನನಗೆ ಯಾವುದೆ ಪಾಲು ಬಂದಿರುವುದಿಲ್ಲ. ಸರ್ವೆ ನಂಬರ ೧೩೬ ರಲ್ಲಿ ಈಗ ಪಹಣಿಯಲ್ಲಿ ೪ ಎಕರೆ ಜಮೀನು ನನ್ನ ಹೆಸರಿನಲ್ಲಿದೆ ಎಂದರೆ ಸರಿ. ನನಗೆ ಈಗ ೪ ಎಕರೆ ಜಮೀನ ಬಿಟ್ಟು ಬೇರೆ ಜಮೀನು ಇಲ್ಲ ಎಂದರೆ ಸರಿ. ನಾನು ಭೂಸ್ವಾಧೀನ ಪರಿಹಾರದ ಹಣದಿಂದ ಮತ್ತು ಜಮೀನು ಮಾರಾಟ ಮಾಡಿ ಬಂದ ಹಣದಿಂದ ಈಗ ೧೦ ಎಕರೆ ಜಮೀನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಭೂಸ್ವಾಧೀನ ಪರಿಹಾರದ ಹಣದಲ್ಲಿ ವಾದಿಯರಿಗೆ ಯಾವುದೆ ಹಣ ನೀಡಿಲ್ಲ ಎಂದರೆ ಸಾಕ್ಷಿಯು ಅವರ ಪಾಲಿನ ಹಣವನ್ನು ಅವರವರೆ ತೆಗೆದುಕೊಂಡಿರುತ್ತಾರೆ ಎನ್ನುತ್ತಾರೆ. ನನ್ನ ತಾಯಿಯ ಹೆಸರಿನಲ್ಲಿ ಈಗ ೪ ಎಕರೆ ಜಮೀನು ಇರುತ್ತದೆ ಎಂದರೆ ಸರಿ. ಅದರಲ್ಲೂ ಕೂಡಾ ವಾದಿಯರಿಗೆ ಪಾಲು ಇದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.